ರೈತರ ಕೃಷಿ ಜಮೀನಿನ ಪೋಡಿ

77(657); ಶ್ರೀ ರವಿಸುಬ್ರಮಣ್ಯ ಎಲ್.ಎ. (ಬಸವನಗುಡಿ)

ಅ) ಇತ್ತೀಚಿನ ವರ್ಷದಲ್ಲಿ ರೈತರ ಜಮೀನನ್ನು ಪೋಡಿ ಮಾಡಿಕೊಡಲು ಅರ್ಜಿಗಳು ಬಂದಿದ್ದು, ಈ ಕಾರ್ಯ ವಿನಾಕಾರಣ ವಿಳಂಬ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಅರ್ಜಿಗಳು ಕೃಷಿ ಜಮೀನಿನ ಪೋಡಿಗಾಗಿ ಬಂದಿದೆ : (ವಿವರ ನೀಡುವುದು)

ಇ) ಕೃಷಿ ಜಮೀನಿನ ಪೋಡಿಗಾಗಿ ಬಂದ ಅರ್ಜಿಯನ್ನು ನಿಗದಿತ ಸಮಯದಲ್ಲಿ ವಿಲೇವಾರಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಬಂದಿರುತ್ತದೆ.

ಆ)

ಜಿಲ್ಲೆಗಳಲ್ಲಿ ಪೋಡಿಗಾಗಿ ಸ್ವೀಕೃತವಾದ ಅರ್ಜಿಗಳು	139855
ಪೋಡಿಗಾಗಿ ಸ್ವೀಕೃತವಾಗಿರುವ ಪ್ರಕರಣಗಳು (ತತ್ಕಾಲ್ ಪೋಡಿ)	24617
ಅನ್ಯಕ್ರಾಂತಕ್ಕಾಗಿ ಸ್ವೀಕೃತವಾಗಿರುವ ಪ್ರಕರಣಗಳು (ಅಲಿನೇಷನ್) :	8310
ಕ್ರಯಕ್ಕಾಗಿ ಸ್ವೀಕೃತವಾಗಿರುವ ಪ್ರಕರಣಗಳು (11ಇ) :	106928

ಇ) ಸರ್ವೆ ದಾಖಲೆ ಹಾಗೂ ಪಹಣಿಯಲ್ಲಿ ಯಾವುದೆ ನ್ಯೂನತೆ ಇಲ್ಲದಿದ್ದಲ್ಲಿ ಇಂತಹ ಪ್ರಕರಣಗಳನ್ನು 30 ದಿವಸಗೊಳಗಾಗಿ

ಇತ್ಯರ್ಥಪಡಿಸುವಂತೆ ದಿನಾಂಕ: 10/12/2007ರ ಸುತ್ತೋಲೆಯನ್ವಯ ಸೂಚನೆಗಳನ್ನು ನೀಡಲಾಗಿರುತ್ತದೆ.

ಪಹಣಿ ಪತ್ರಿಕೆಯ ಕಲಂ 3 ಮತ್ತು 9 ರಲ್ಲಿ ಹಕ್ಕುದಾರರಿಗೆ ಸೇರಿದ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಸರ್ವೆ ನಂಬರ್ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಮತ್ತು ಆಕಾರಬಂದು ಪಹಣಿ ವಿಸ್ತೀರ್ಣಗಳಿಗೆ ವ್ಯತ್ಯಾಸ ಭೂಮಾಪಕರ ಕೊರತೆಯಿಂದ ಪೋಡಿಗಾಗಿ ಬಂದ ಅರ್ಜಿಯು ನಿಗದಿತ ಸಮಯದಲ್ಲಿ ವಿಲೇವಾರಿಯಾಗದೇ ಇರುತ್ತದೆ.

1. ಕಡತಗಳ ಶೀಘ್ರ ವಿಲೇವಾರಿಗಾಗಿ ಇಲಾಖೆಯು ಭೂಮಾಪಕರು ಮತ್ತು ಪರವಾನಗಿ ಭೂಮಾಪಕರು ಪ್ರತಿ ಮಾಹೆ ಕನಿಷ್ಠ 23 ಕಡತಗಳನ್ನು ವಿಲೇಪಡಿಸುವಂತೆ ಸುತ್ತೋಲೆ ಸಂಖ್ಯೆ: ಪಿಎಂಯು ಎಂಓಜೆ.ಸಿಐಆರ್.002/2014–15 ದಿನಾಂಕ:09/04/2014ರನ್ವಯ ಸೂಚನೆಗಳನ್ನು ನೀಡಲಾಗಿರುತ್ತದೆ.

2. ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವ ಒಂದೇ ಗ್ರಾಮದ ಪ್ರಕರಣಗಳನ್ನು ಖಾಸಗಿ ಸಂಸ್ಥೆಯ ಮೂಲಕ ಅಳತೆ ಮಾಡಿಸಿ ವಿಲೇ ಮಾಡಲು ಪ್ರಾಯೋಗಿಕವಾಗಿ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿದೆ.

3. ಹೊಸದಾಗಿ ಭೂಮಾಪಕರು ನೇಮಕಗೊಂಡಿದ್ದು. ಅವರು ವೃತ್ತಿ ತರಬೇತಿಯನ್ನು ಪೂರ್ಣಗೊಳಿಸಿ ಆಗಸ್ಟ್ 2014ರ ಮಾಹೆಯಿಂದ ಕಾರ್ಯಪ್ರವೃತ್ತರಾಗುವುದರಿಂದ ಬಾಕಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕ್ರಮ ಜರುಗಿಸಲಾಗುವುದು.

APPLICATIONS RECEIVED IN MOJINI REPORT LAQ NO 657					
Sl.No	District Name	11E	Alienation	Tatkal	Total
1	ಉಡುಪಿ	5040	565	603	6208
2	ಉತ್ತರಕನ್ನಡ	2653	301	740	3694
3	ಕೊಡಗು	1193	262	251	1706
4	ಕೊಪ್ಪಳ	1813	120	715	2648
5	ಕೋಲಾರ	2865	45	669	3579
6	ಗದಗ	1616	201	531	2348
7	ಗುಲ್ಬರ್ಗ	4388	25	1236	5649
8	ಚಿಕ್ಕಬಳ್ಳಾಪುರ	3091	144	648	3883
9	ಚಿಕ್ಕಮಗಳೂರು	2702	339	830	3871
10	ಚಿತ್ರದುರ್ಗ	3147	162	859	4168
11	ಚಾಮರಾಜನಗರ	1912	194	459	2565
12	ತುಮಕೂರು	6944	1147	1627	9718
13	ದಕ್ಷಿಣ ಕನ್ನಡ	4017	128	402	4547
14	ದಾವಣಗೆರೆ	5211	149	1285	6645

16	ಬೆಂಗಳೂರು ಗ್ರಾಮಾಂತರ	4256	462	749	5467
17	ಬೆಂಗಳೂರು ಜಿಲ್ಲೆ	3928	134	955	5017
18	ಬಿಜಾಪುರ	3037	114	1365	4516
19	ಬೆಳಗಾವ	5841	670	1388	7899
20	ಬಳ್ಳಾರಿ	4005	251	919	5175
21	ಬಾಗಲಕೋಟೆ	1901	36	1022	2959
22	ಬೀದರ್	2544	156	709	3409
23	ಮಂಡ್ಯ	5006	437	744	6187
24	ಮೈಸೂರು	5136	697	934	6767
25	ಯಾದಗಿರ್	2298	180	525	3003
26	ರಾಮನಗರ	4684	344	968	5996
27	ರಾಯಚೂರು	4037	498	875	5410
28	ಶಿವಮೊಗ್ಗ	2515	194	725	3534
29	ಹಾವೇರಿ	2971	30	587	3588
30	ಹಾಸನ	6512	295	903	7710
	TOTAL	106928	8310	24617	139855

ಶ್ರೀ ಎಲ್.ಎ. ರವಿಸುಬ್ರಮಣ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಜಿಲ್ಲೆಗಳಲ್ಲಿ ಪೋಡಿಗಾಗಿ ಸ್ವೀಕೃತವಾದ ಅರ್ಜಿಗಳು ಸುಮಾರು 1,39,855 ಎಂದು ಉತ್ತರದಲ್ಲಿ ಹೇಳಿದ್ದಾರೆ. 2007ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿ 30 ದಿವಸಗೊಳಗಾಗಿ ಪೋಡಿಗಳನ್ನು ಇತ್ಯರ್ಥ ಪಡಿಸಿಕೊಡಬೇಕೆಂಬ ನಿರ್ಧಾರವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಆದರೆ, ಎರಡು ವರ್ಷಗಳ ಹಿಂದಿನಿಂದ ಪೋಡಿಗಾಗಿ ಅರ್ಜಿ ಸಲ್ಲಿಸಿದ್ದರೂ ಸಹ ಇಲ್ಲಿಯವರೆಗೆ ಪೋಡಿ ಆಗುತ್ತಿಲ್ಲ. ಸರ್ವೇಯರ್‌ಗಳ ಕೊರತೆ ಇದೆ ಎಂದು ಹಿಂದಿನಿಂದ ಹೇಳುತ್ತಾ ಬಂದಿದ್ದಾರೆ. ಈಗಿನ ಉತ್ತರದಲ್ಲಿಯೂ ಕೂಡ ಸರ್ವೇಯರ್‌ಗಳ ಕೊರತೆ ಇದೆ ಎಂದು ಹೇಳಿದ್ದಾರೆ. ಸರ್ವೆಯರ್‌ಗಳು ಒಂದು ತಿಂಗಳಿಗೆ 23 ಅರ್ಜಿಗಳನ್ನು ಕ್ಲಿಯರ್ ಮಾಡಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ, ನನ್ನ ಪ್ರಶ್ನೆ ಏನೆಂದರೆ, ಸರ್ವೇಯರ್‌ಗಳನ್ನು ಯಾವಾಗ ನೇಮಕಾತಿ ಮಾಡಿಕೊಳ್ಳುತ್ತೀರೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:– ಈ ಬಗ್ಗೆ ಉತ್ತರದಲ್ಲಿ ಹೇಳಿದ್ದಾರೆ ನೋಡಿ. ಹೊಸದಾಗಿ ಭೂಮಾಪಕರು ನೇಮಕಗೊಂಡಿದ್ದು, ಅವರು ವೃತ್ತಿ ತರಬೇತಿಯನ್ನು ಪೂರ್ಣಗೊಳಿಸಿ ಆಗಸ್ಟ್ 2014ರ ಮಾಹೆಯಿಂದ ಕಾರ್ಯಪ್ರವೃತ್ತರಾಗುವುದಿರಂದ ಬಾಕಿ ಪ್ರಕರಣಗಳು ಶೀಘ್ರ ವಿಲೇವಾರಿಗೆ ಕ್ರಮ ಜರುಗಿಸಲಾಗುವುದು ಎಂದು ಉತ್ತರದಲ್ಲಿ ಹೇಳಿದ್ದಾರೆ.

ಶ್ರೀ ಎಲ್.ಎ. ರವಿಸುಬ್ರಮಣ್ಯ:– ಇಲ್ಲಿಯವರೆಗೆ ಭೂಮಾಪಕರನ್ನು ನೇಮಕ ಮಾಡಿಕೊಂಡಿದ್ದಾರೆಯೇ? ಮಾಡಿಕೊಂಡಿದ್ದರೆ ಎಷ್ಟು ಜನ ಸರ್ವೇಯರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಹಾಗೂ ಬಾಕಿ ಉಳಿದುಕೊಂಡಿರುವ ಪೋಡಿಗಳನ್ನು ಎಷ್ಟು ದಿವಸಗಳಲ್ಲಿ ಮುಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, I will give some information.

ಶ್ರೀ ಎಲ್.ಎ. ರವಿಸುಬ್ರಮಣ್ಯ:– ಮಾನ್ಯ ಅಧ್ಯಕ್ಷರೆ, ಡಿ.ಸಿ.ಗಳ ಅನುಮತಿ ತೆಗೆದುಕೊಂಡು ಪೋಡಿ ಮಾಡಬೇಕು. ಆದ್ದರಿಂದ, ಈಗ ಪೋಡಿ ಮಾಡುವುದನ್ನು ನಿಲ್ಲಿಸಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ರೈತರ ಕೃಷಿ ಭೂಮಿಯ ಪೋಡಿ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅವರು ಕೇಳಿರುವ ಪ್ರತಿಯೊಂದು ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಈ ಬಗ್ಗೆ ನಮಗೂ ಕೂಡ ನಿಮ್ಮಷ್ಟೇ concern ಇದೆ. ಪೋಡಿ ಮಾಡಿಕೊಡುವ ಬಗ್ಗೆ ಗೊಂದಲ ಇದ್ದು, ಇದರ ಬಗ್ಗೆ ರೈತರದು ತುಂಬಾ ಅಸಮಾಧಾನ ಇದೆ. ರೈತರು ಈ ಬಗ್ಗೆ ಎಲ್ಲಾ ಸದಸ್ಯರಿಗೆ ದೂರನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಏನು ಮಾಡಿದ್ದೇವೆಂಬ ಬಗ್ಗೆ ಒಂದೆರೆಡು ನಿಮಿಷದಲ್ಲಿ ಮಾಹಿತಿ ಕೊಡುತ್ತೇನೆ. ಆನಂತರ ಪೋಡಿ ಬಗ್ಗೆ ಏನು ಮಾಡಿದ್ದೇವೆಂಬುದು ಪ್ರತಿಯೊಬ್ಬ ಸದಸ್ಯರಿಗೂ ಸಹ ಗೊತ್ತಾಗುತ್ತದೆ. ಆನಂತರ ಮುಖ್ಯ ಪ್ರಶ್ನೆಯನ್ನು ಕೇಳಿರುವ ಮಾನ್ಯ ಸದಸ್ಯರು ಹಾಗೂ ಇತರೆ ಮಾನ್ಯ ಸದಸ್ಯರು ಮತ್ತು ಮಾನ್ಯ ದತ್ತಾರವರು ಉಪ ಪ್ರಶ್ನೆ ಕೇಳದರೆ ಅದಕ್ಕೆ ನಾನ್ನು ಸ್ಪಷ್ಟೀಕರಣ ಕೊಡುತ್ತೇನೆ. ಕೃಷಿ ಜಮೀನಿಗೆ ಪೋಡಿ ಮಾಡಿಕೊಡತಕ್ಕಂಥದರ ವಿಲೇವಾರಿಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳುತ್ತೇನೆ. ಆನಂತರ ತಾವು ಈ ಬಗ್ಗೆ ಏನು ಪ್ರಶ್ನೆ ಬೇಕಾದರೂ ಕೇಳಬಹುದು. ಬಾಕಿ ಇರತಕ್ಕಂಥ 1,39,855 ಪೋಡಿ ಕಡತಗಳನ್ನು ಶೀಘ್ರ ವಿಲೇವಾರಿಗೆ ಸರ್ಕಾರ ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ. ಅದರ ಬಗ್ಗೆ ಒಂದೊಂದಾಗಿ ಹೇಳುತ್ತೇನೆ. ಅದೇನೆಂದರೆ, ತಮಗೆಲ್ಲ ಗೊತ್ತಿರುವ ಹಾಗೆ ಕಂದಾಯ ಇಲಾಖೆಯಲ್ಲಿ ಸರ್ಕಾರಿ ಜಮೀನುಗಳಲ್ಲಿ ಮಾಡಿರುವಂಥ ಭೂ ಮಂಜೂರಾತಿ ಮತ್ತು ಗುತ್ತಿಗೆ ಕೊಟ್ಟಿರತಕ್ಕಂತಹದು ನಮೂನೆ 50–53ರಲ್ಲಿ ಮಂಜೂರು ಮತ್ತೆ ಭೂ ಸ್ವಾಧೀನ ಪ್ರಕರಣಗಳ ಬಗ್ಗೆ ಮೂಲ ಕಡತಗಳ ಆಧಾರದ ಮೇಲೆ ನಮೂನೆ 1 ರಿಂದ 5 ರವರೆಗೆ ಭರ್ತಿ ಮಾಡುವ ಬಗ್ಗೆ ಎಲ್ಲಾ

ಜಿಲ್ಲಾಧಿಕಾರಿಗಳು ಮತ್ತು ಕಂದಾಯ ಅಧಿಕಾರಿಗಳಿಗೆ ಕಾರ್ಯಗಾರವನ್ನು ಏರ್ಪಡಿಸಿ ಶೀಘ್ರ ಕ್ರಮಕ್ಕೆ ಸೂಚಿಸಿದೆ. ಸರ್ವೆ ಮತ್ತು ಪಹಣಿ ದಾಖಲೆಗಳಲ್ಲಿ ನ್ಯೂನತೆ ಇಲ್ಲದ ಪ್ರಕರಣಗಳನ್ನು 30 ದಿನದೊಳಗೆ ಅಳತೆ ಮಾಡಲು ಸೂಚನೆ ನೀಡಲಾಗಿದೆ. ಸರ್ಕಾರಿ ಭೂಮಾಪಕರು ಮತ್ತು ಪರವಾನಗಿ ಭೂಮಾಪಕರು ತಿಂಗಳಲ್ಲಿ ಕಡ್ಡಾಯವಾಗಿ 23 ಕಡತಗಳ ವಿಲೇವಾರಿ ಪ್ರಗತಿ ನೀಡಲು ಸೂಚಿಸಲಾಗಿದೆ. ಇತ್ತೀಚೆಗೆ ನಾವು modern technology ಯನ್ನು ಕೂಡ ಉಪಯೋಗಿಸಿದ್ದೇವೆ. ಅಂದರೆ, ಇಲಾಖೆಯಲ್ಲಿ ವೈಜ್ಞಾನಿಕ ತಂತ್ರಾಂಶವನ್ನು ಬಳಸುವ ದೃಷ್ಟಿಯಿಂದ ETS(Electronic Total Station) and DGPS(Differential Global Positioning System) ಈ ಉಪಕರಣಗಳನ್ನು ಖರೀದಿಸಲು ಯೋಜಿಸಿದ್ದು, ಟೆಂಡರ್ ಆದೇಶವನ್ನು ನೀಡಲಾಗಿದೆ. ಮೋಜಿಣಿ ತಂತ್ರಾಂಶದಲ್ಲಿ ಮೋಜಿಣಿ ವಿ–2 ಬಾಕಿ ಇರುವ ಕಡತಗಳ ವಿಲೇವಾರಿ ದೃಷ್ಟಿಯಿಂದ ಸರ್ಕಾರಿ ಭೂಮಾಪಕರಿಗೂ ಸಹ login ಸೌಕರ್ಯವನ್ನು ಕಲ್ಪಿಸಲು ತೀರ್ಮಾನಿಸಲಾಗಿದೆ. ಕಡತ ವಿಲೇವಾರಿಗಾಗಿ ಖಾಸಗಿ ಸಂಸ್ಥೆಗಳ ಸಹಯೋಗದಿಂದ ಹೆಚ್ಚಿನ ಕಡತಗಳು ಬಾಕಿ ಉಳಿದುಕೊಂಡಿರುವ ಗ್ರಾಮಗಳನ್ನು ಆಯ್ಕೆ ಮಾಡಿ ಅಳತೆ ಕಾರ್ಯವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲು ಯೋಜಿಸಲಾಗಿದ್ದು, ಅದರಂತೆ ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನಲ್ಲಿರುವ ಇಂಗಳೇಶ್ವರ ಗ್ರಾಮದಲ್ಲಿ ಅಳತೆ ಕಾರ್ಯವನ್ನು ಪ್ರಾರಂಭಿಸಲಾಗಿದೆ. ನಮ್ಮ ಇಲಾಖೆಯಲ್ಲಿ ಒಟ್ಟು 3040 ಭೂಮಾಪಕರು ಇದ್ದಾರೆ. ಹಾಲಿ 1437 ಭೂಮಾಪಕರು ಇದ್ದಾರೆ. ಈಗಾಗಲೇ 1013 ಭೂ ಮಾಪಕರು ತರಬೇತಿಯನ್ನು ಪಡೆಯುತ್ತಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಭೂಮಾಪಕರ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲಾಗಿದೆ. 1013 ಜನರಿಗೆ 6 ತಿಂಗಳವರೆಗೆ ತರಬೇತಿಯನ್ನು ಸಹ ನೀಡಲಾಗಿದೆ. ಇವರೆಲ್ಲರನ್ನೂ ಸೇರಿಸಿದರೆ ಒಟ್ಟು 3045 ಇರುತ್ತದೆ. ಇವರೆಲ್ಲರನ್ನೂ ಜಾಬ್ ಟ್ರೈನಿಂಗ್‌ಗೆ ಹಾಕಿದ್ದು, ಇವರ ತರಬೇತಿ ಆಗಸ್ಟ್ ತಿಂಗಳಲ್ಲಿ ಮುಗಿಯುತ್ತಿದ್ದು, ಯಾವ್ಯಾವ ಜಿಲ್ಲೆಗಳಲ್ಲಿ ಭೂಮಾಪಕರ ಕೊರತೆ ಇದೆಯೋ ಅಲ್ಲಿಗೆ ಇವರನ್ನು ಪೋಸ್ಟಿಂಗ್ ಮಾಡುತ್ತೇವೆ. ಇರಿಗೇಷನ್ ಪ್ರಾಜೆಕ್ಟ್‌ಗಳು ಅಥವಾ ಹೈವೇ

ರಸ್ತೆಗಳ ಸರ್ವೇ ಕಾರ್ಯ ಮಾಡುವುದಕ್ಕೆ ನಾವು ಭೂಮಾಪಕರನ್ನು ಕೊಡುತ್ತಿದ್ದೇವೆ. ಹಾಗೆಯೇ, ಕೇಂದ್ರ ಕಛೇರಿ, ಉಪ ನಿರ್ದೇಶಕ ಕಛೇರಿಗಳು, ನಗರ ಭೂಮಾಪನ ಕಛೇರಿಗಳು, ತರಬೇತಿ ಸಂಸ್ಥೆಗಳು, ತಾಲ್ಲೂಕು ಕಛೇರಿಗಳು ಹಾಗೂ ಅನ್ಯ ಸೇವೆಗಳಿಗೆ ನಿಯೋಜನೆ ಮಾಡಿರತಕ್ಕಂಥವರನ್ನು ಬಿಟ್ಟು ನಮ್ಮಲ್ಲಿ 2345 ಭೂಮಾಪಕರು ಅಳತೆ ಕೆಲಸಕ್ಕೆ ಲಭ್ಯವಾಗಿರುತ್ತಾರೆ. ಸರ್ಕಾರದ ಸುತ್ತೋಲೆಯಂತೆ 23X2340 ಅಂದರೆ, 23 ಪೋಡಿಗಳನ್ನು 1 ತಿಂಗಳಲ್ಲಿ ಮಾಡಿದರೆ ಪ್ರತಿ ತಿಂಗಳಿಗೆ ಸುಮಾರು 53,935 ಪೋಡಿಗಳನ್ನು ನಾವು ವಿಲೇವಾರಿ ಮಾಡುವುದಕ್ಕೆ ಸಾಧ್ಯವಿದೆ. ಮಾನ್ಯ ಅಧ್ಯಕ್ಷರೆ, ಕೊನೆಯಲ್ಲಿ ತಮ್ಮ ಮುಖಾಂತರ ಒಂದೇ ಒಂದು ವಿಷಯವನ್ನು ಸದನ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಬಾಕಿ ಇರುವ 1,39,855 ಅರ್ಜಿಗಳು ಮತ್ತು ಮುಂದಿನ 6 ತಿಂಗಳಲ್ಲಿ ಸ್ವೀಕರಿಸುವ ಅರ್ಜಿಗಳನ್ನು ಗಣನೆಗೆ ತೆಗೆದುಕೊಂಡರೆ ಸರಾಸರಿ 15 ಸಾವಿರದಂತೆ ಒಂದು ತಿಂಗಳಿಗೆ ತೆಗೆದುಕೊಳ್ಳುತ್ತೇವೆ. ಇದೆಲ್ಲ ಸೇರಿಸಿದರೆ 90,000 ಆಗುತ್ತದೆ. ಈಗ ಇರುವ ಅರ್ಜಿಗಳನ್ನು ಸೇರಿಸಿದರೆ 2,29,855 ಪೋಡಿಗಳನ್ನು ಮುಂದಿನ ಡಿಸೆಂಬರ್ ಅಂತ್ಯದ ವೇಳೆಯೊಳಗೆ ವಿಲೇವಾರಿ ಮಾಡಿ ಇತ್ಯರ್ಥ ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರಿ ವೈ.ಎಸ್.ವಿ. ದತ್ತ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿರುವಂತ ವಿಷಯಗಳನ್ನು ನಾವು ಕೇಳಿಸಿಕೊಂಡಿದ್ದೇವೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಆಗಿರತಕ್ಕಂಥ ಬೆಳವಣಿಗೆಯನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಅದರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು. ನನ್ನ ತಾಲ್ಲೂಕಿನಲ್ಲಿ ನಾನು ಮೇ ತಿಂಗಳಲ್ಲಿ ಪರವಾನಗಿ ಪಡೆದುಕೊಂಡಿರುವ ಭೂಮಾಪಕರು ಮತ್ತು ಸರ್ಕಾರಿ ಭೂಮಾಪಕರನ್ನು ಕರೆದು ಒಂದು ಸಭೆ ಮಾಡಿದ್ದೇನೆ. ನಮ್ಮ ಕಡೂರು ತಾಲ್ಲೂಕಿನಲ್ಲಿ ಪೋಡಿ ಮಾಡುವ 1,500 ಅರ್ಜಿಗಳು ಪೆಂಡಿಗ್ ಇವೆ. ಒಂದು ದಿನಕ್ಕೆ 23 ಪೋಡಿಯ ಕಡತಗಳನ್ನು ಕ್ಲಿಯರ್ ಮಾಡಬೇಕೆಂದು ತಾವು ಹೇಳಿದ್ದೀರಿ. ಆದರೆ, ಸರ್ಕಾರಿ ಭೂಮಾಪಕರು ಅಂದರೆ, regular surveyours ಯಾರು ಇದ್ದಾರೆಯೋ ಅವರೂ ಕೇವಲ ಹದ್ದುಬಸ್ತು ಕೆಲಸ

ಮಾಡಿಕೊಡುವ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ನನ್ನ ಹತ್ತಿರ ಇರುವ ಸ್ಪಷ್ಟವಾದ ಮಾಹಿತಿಯನ್ನು ನಿಮಗೆ ಹೇಳುತ್ತಿದ್ದೇನೆ. ಹದ್ದುಬಸ್ತಿಗೆ ಮಾತ್ರ ಎಲ್ಲಾ ಕಡೆ ಹೋಗಿ ಬರೆದುಕೊಂಡು ಸರ್ವೆ ಮಾಡುವ ಕೆಲಸವನ್ನು ಪರವಾನಗಿ ಭೂಮಾಪಕರಿಗೆ ವಹಿಸಿದ್ದಾರೆ. ಆದರೆ, ಪರವಾನಗಿ ಭೂಮಾಪಕರು ಏನು ತೊಂದರೆ ಹೇಳುತ್ತಾರೆಂದರೆ, ತಾಲ್ಲೂಕು ಕಛೇರಿಯಲ್ಲಿನ ಸರ್ವೆ ಇಲಾಖೆಯಲ್ಲಿ ಕೇವಲ ಒಂದು ಕಂಪ್ಯೂಟರ್ ಮಾತ್ರ ಇರುತ್ತದೆ. ನಾನು ಈ ಮಾಹಿತಿಯೆಲ್ಲವನ್ನು ಕಲೆಕ್ಟ್ ಮಾಡಿದ ಮೇಲೆ ಅದನ್ನು upload ಮಾಡಿ ಎಂದು ಹೇಳುತ್ತಾರೆ.

ಅಧ್ಯಕ್ಷರು:– ಮಾನ್ಯ ದತ್ತಾರವರೆ, ಈಗ ಪ್ರಶ್ನೆ ಕೇಳುವುದಲ್ಲ. ನಾನು ಹೇಳುವುದನ್ನು ದಯವಿಟ್ಟು ಕೇಳಿ. ನಾನು ನಿಮಗೆ ಎಷ್ಟು ಸಾರಿ ಹೇಳಬೇಕು? ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ? ಅವರು ಉತ್ತರ ಕೊಟ್ಟಿದ್ದಾರೆ. ಹೆಚ್ಚಿನ ಚರ್ಚೆ ಇದ್ದರೆ, ಚರ್ಚೆಗೆ ಹಾಕಿಕೊಳ್ಳಿ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ಸಮಸ್ಯೆ ಪರಿಹಾರ ಆಗಿಲ್ಲ. ಆದ್ದರಿಂದ, ನೀವು ಮಾಡಬೇಕಾಗಿರುವ ಕೆಲಸ ಏನೆಂದರೆ, ರೆಕಾರ್ಡ್ಸ್ ಸೆಕ್ಷನ್‌ನಲ್ಲಿದೆ.

ಅಧ್ಯಕ್ಷರು:– ದಯವಿಟ್ಟು ನಾನು ಹೇಳುವುದನ್ನು ಕೇಳಿ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಂತೆ ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಅದು ಪ್ರಶ್ನೆ ಅಲ್ಲ.

ಶ್ರೀ ವೈ.ಎಸ್.ವಿ. ದತ್ತ:– ಪರಿಹಾರ ಹೇಳತಕ್ಕಂತಹದು ಪ್ರಶ್ನೆ ಅಲ್ಲವೇ? ಪರವಾನಿಗೆ ಭೂಮಾಪಕರು ಇದ್ದಾರೆ.

ಅಧ್ಯಕ್ಷರು:– ಏನೇನು ಮಾಡಬೇಕೆಂಬುದರ ಬಗ್ಗೆ ಒಂದು ಸುತ್ತೋಲೆಯ ಮುಖಾಂತರ ಕಳುಹಿಸಿ.

ಶ್ರೀ ವೈ.ಎಸ್.ವಿ. ದತ್ತ:– ಪರವಾನಗಿ ಭೂಮಾಪಕರು ನಿಮ್ಮ ತಾಲ್ಲೂಕು ಕಛೇರಿಗೆ ಬಂದು ಅಲ್ಲಿಯೇ ಕಂಪ್ಯೂಟರ್‌ನಲ್ಲಿ ಫೀಡ್ ಮಾಡತಕ್ಕಂಥ ವ್ಯವಸ್ಥೆ ಮಾಡಿಕೊಟ್ಟರೆ ಸೂಕ್ತವಾಗುತ್ತದೆ ಹಾಗೆಯೇ ರೆಕಾರ್ಡ್ಸ್ ರೂಂಗೆ ಒಬ್ಬ ನುರಿತ ಮತ್ತು ಅನುಭವ ಹೊಂದಿರುವಂಥ ವ್ಯಕ್ತಿಯನ್ನು ಹಾಕಬೇಕು. ಇಲ್ಲದಿದ್ದರೆ.. ತೊಂದರೆ ಆಗುತ್ತದೆ.

ಅಧ್ಯಕ್ಷರು:– ಮಾನ್ಯ ದತ್ತಾರವರೇ, ನಾನು ಹೇಳುವುದನ್ನು ದಯವಿಟ್ಟು ಕೇಳಿ. ಇನ್ನು 2–3 ದಿವಸಗಳಲ್ಲಿ ಕಂದಾಯ ಇಲಾಖೆ ಬೇಡಿಕೆ ಚರ್ಚೆಗೆ ಬರುತ್ತದೆ. ಆ ಸಂದರ್ಭದಲ್ಲಿ ವಿಸ್ತಾರವಾಗಿ ಮಾತನಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನೇಮಕಾತಿ ಮಾಡಿಕೊಂಡಿರುವ ಸರ್ವೇಯರ್‌ಗಳು ಜಾಬ್ ಟ್ರೈನಿಂಗ್‌ನಲ್ಲಿದ್ದಾರೆ. ಇವರ ತರಬೇತಿ ಮುಗಿದ ಮೇಲೆ ಲೈಸೆನ್ಸ್ ಭೂಮಾಪಕರ ಜೊತೆಗೆ ಇವರನ್ನು ಸಹ ಹಾಕಿ ಲೈಸೆನ್ಸ್ ಭೂಮಾಪಕರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದ ರೀತಿಯಲ್ಲಿ ಸರ್ಕಾರಿ ಭೂಮಾಪಕರು ಅವರ ಜೊತೆ ಕೂಡಿ ತಿಂಗಳಿಗೆ 23 ಕಡತಗಳನ್ನು ವಿಲೇವಾರಿ ಮಾಡುವುದಕ್ಕೆ ನಾವು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ.

ಶ್ರೀ ವೈ.ಎಸ್.ವಿ. ದತ್ತ:– ಕಡೂರು ತಾಲ್ಲೂಕಿನ ಸರ್ವೆ ಇಲಾಖೆಯ ಒಬ್ಬ ಅಧಿಕಾರಿ ಮಹಾ ಭ್ರಷ್ಟರಾಗಿರುವುದರ ಬಗ್ಗೆ ಕೂಡ ನಾನು ತಮ್ಮ ಗಮನಕ್ಕೆ ವೈಯಕ್ತಿಕವಾಗಿ ತಂದಿದ್ದೇನೆ. ನಿಮ್ಮಲ್ಲಿ ಸಾಕಷ್ಟು ಪೆಂಡಿಂಗ್ ಇದೆ. ಕಾರಣ ಏನೆಂದರೆ, ನಿಮ್ಮಲ್ಲಿ ಸೀನಿಯಾರಿಟಿ ಇರುತ್ತದೆ. ಆದರೆ, ಅಲ್ಲಿ ಸೀನಿಯಾರಿಟಿ ಇರುವವರನ್ನು ಬಿಟ್ಟು ಬೇರೆ ಬೇರೆಯರಿಗೆ ಕೊಡುತ್ತಿದ್ದಾರೆ. ಆಪ್ಪರಿಂದ, ಅದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ದತ್ತಾರವರೆ, ನಾವೇನು ಮಾಡಬೇಕೆಂಬುದರ ಬಗ್ಗೆ ನಾನು ಬಹಳ ಸುದೀರ್ಘವಾಗಿ ಹೇಳಿದ್ದೇನೆ. ಡಿಸೆಂಬರ್ ತಿಂಗಳ ಅಂತ್ಯಕ್ಕೆ ಯಾವುದೇ ಪೋಡಿಗಳೂ ಬಾಕಿ ಇಲ್ಲದಂತೆ ಮಾಡುತ್ತೇವೆ.

ಶ್ರೀ ಎಲ್.ಎ.ರವಿ ಸುಬ್ರಮಣ್ಯ:– ಮಾನ್ಯ ಅಧ್ಯಕ್ಷರೆ, ಈಗ ಅವರೆ ಹೇಳಿದ ಪ್ರಕಾರ ತಿಂಗಳಿಗೆ 50 ಸಾವಿರ ಅರ್ಜಿಗಳು ವಿಲೆವಾರಿ ಆಗುತ್ತವೆಂದು ಹೇಳಿದ್ದಾರೆ. ಅದರ ಪ್ರಕಾರ 1.39 ಲಕ್ಷ ಅರ್ಜಿಗಳು, ಈಗ ಬರುವ ಅರ್ಜಿಗಳನ್ನು ಬಿಟ್ಟು ಮೂರು ತಿಂಗಳಲ್ಲಿ complete ಆಗಬೇಕಾಗುತ್ತದೆ. ನೀವು ಹೇಳಿದಂತೆ ಡಿಸೆಂಬರ್ ಅಂತ್ಯದವರೆಗೆ ಹೊಗಬಹುದು. ನಿಮ್ಮ ಮೇಲೆ ನಮಗೆ ಅಪಾರವಾದಂಥ ನಂಬಿಕೆ ಇದೆ. ದಯಮಾಡಿ ಮೂರು ತಿಂಗಳಲ್ಲಿ ಕ್ಲಿಯರ್ ಮಾಡಿದರೆ ನಿಜವಾಗಲೂ 2–3 ವರ್ಷದಿಂದ ಕಾಯುತ್ತಿರುವಂಥ ರೈತರಿಗೆ ಏನಾದರೊಂದು ನ್ಯಾಯವನ್ನು ಒದಗಿಸಿಕೊಟ್ಟಂತಾಗುತ್ತದೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:– ತಾವು ಹೇಳಿದಂತೆ ಆ ಕಡೆ ಗಮನವನ್ನು ಕೊಟ್ಟು ಮಾಡಿಸುತ್ತೇವೆ.

ಶ್ರೀ ಎಲ್.ಎ. ರವಿ ಸುಬ್ರಮಣ್ಯ:– Thank you.

ಅಂತರ್ಜಲ ಕುಸಿಯುತ್ತಿರುವುದು

78(168); ಶ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ)

ಅ) ರಾಜ್ಯದಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ;? (ಜಿಲ್ಲಾವಾರು ವಿವರ ನೀಡುವುದು)

ಆ) ಅಂತರ್ಜಲ ಮಟ್ಟ ಕುಸಿಯಲು ಕಾರಣಗಳೇನು; ಈ ಬಗ್ಗೆ ಅಧ್ಯಯನ ನಡೆಸಲಾಗಿದೆಯೇ; ಅಧ್ಯಯನ ವರದಿಯಲ್ಲಿನ ಪ್ರಮುಖ ಅಂಶಗಳೇನು;

ಇ) ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ವೆಚ್ಚ ಮಾಡಿರುವ ಹಣ ಎಷ್ಟು; (ಕಳೆದ 3 ವರ್ಷಗಳ ವಿವರ ನೀಡುವುದು)?